ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲಮೆಂಟ್ ಡಿಪಾರ್ಟ್‌ಮೆಂಟ್.

ಇಸ್ತಿಹಾರ್‌ನಾಮೆ.

ನಂ. 836. ತಾರೀಖು 22ನೇ ಫಿಬ್ರವರಿ 1889.

ಇದರಿಂದ ಯಲ್ಲರಿಗೂ ತಿಳಿಯಪಡಿಸುವದೇನಂದರೆ, ಕೋಲಾರ ಡಿಸ್ಟ್ರಿಕ್ಟ್ ಕೋಲಾರ ತಾಲ್ಲೂಕಿನ ರೆವಿನ್ಯೂ ಸರ್ವೆ ಸೆಟ್ಲಮೆಂಟ್ ಸ್ಸ 1889ನೇ ಮಾಜಿ ಮಾರ್ಚಿ ತಾರೀಖು 2ರಲ್ಲಿ ಯಾ ಆಸುವಾರಿಗೆ ಪ್ರಾರಂಭಿಸಲ್ಪಡುತ್ತೆ.

ಜೆ. ಪಿ. ಗ್ರಾಂಟ್,
ಸೂಪರಿಂಟೆಂಡೆಂಟ್ ಮೈಸೂರ್ ರೆವಿನ್ಯೂ ಸರ್ವೆ.

ಫೈನಾನ್ಷಿಯಲ್ ಇಲಾಖೆ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಪರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಆಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ್ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಫ್ಫೇಸ್‌ಮೆಂಟ್ ಯಾನೇ ಪರಾ ಬಗ್ಗೆ ಇದರಡೀ ರುಜು ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಫ್ಫೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡಿರ್ನ್,
ಕಾಂಪ್ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್ ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಆರ್ಜಿ ನಂಬರ್ 201.

ಕಾಡುಬಿಸನಹಳ್ಳೀ ತಾ|| ಹುಣಸನಹಳ್ಳಿಲಿ ಇದ್ದ ಮೃತಪಟ್ಟ ಪಟೇಲ್ ಕೃಷ್ಣಪ್ಪನ ಆಸ್ತೀ ವಿಷಯದಲ್ಲಿ—

ಆರ್ಜೀದಾರ ಕಾಳಯ್ಯ ಮೃತಪಟ್ಟ ಸದರೀ ಕೃಷ್ಣಪ್ಪನಿಗೆ ಅಳಿಯ ಆಗಬೇಕೆಂಬ ಹಕ್ಕುದಾರಿ ಮೇಲೆ ಹುಣಸನಹಳ್ಳಿ ಸ್ಥಳದ ಕಾಳಯ್ಯನು ಹುಣಸನಹಳ್ಳೀ ವಾಸಸ್ಥನಾಗಿ ಮೃತಪಟ್ಟ ಪಟೇಲ್ ಕೃಷ್ಣಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಕಾಳಯ್ಯನ ಆರ್ಜಿಯನ್ನು 1889ನೇ ಇಸವಿ ಮಾರ್ಚಿ ತಿಂಗಳು ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಟೇಲ್ ಕೃಷ್ಣಪ್ಪನ ಆಸ್ತಿಗೆ ಹಕ್ಕುದಾರರಾದ ವಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಸ 1889ನೇ ಇಸವಿ ಫಿಬ್ರವರಿ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನನ್ನ ದಸ್ತಖತ್‌ನಿಂ ಕೊಡಲ್ಪಟ್ಟಿತು.

1889ನೇ ಇಸವಿ ಆರ್ಜೀ ನಂಬರ್ 217.

ಮಾಗಡೀ ತಾ|| ಗುಡೇಮಾರನಹಳ್ಳೀಲಿ ಇದ್ದ ಮೃತಪಟ್ಟ ಸಿದ್ದಂಣನ ಆಸ್ತೀ ವಿಷಯದಲ್ಲಿ—

ಆರ್ಜೀದಾರ ಸದರೀ ಸಿದ್ದಣ್ಣನ ಮಕ್ಕಳು ಮೈನರ್‌ಗಳಾದ 1 ವೀರಭದ್ರಯ್ಯ 2 ರೇವಂಣ 3 ರೇವಣಸಿದ್ದ 4 ಸಿದ್ದಲಿಂಗ ಇವರ ಗಾರ್ಡಿಯರ್ ಹೊನ್ನಗಂಗಯ್ಯ, ಮೃತಪಟ್ಟ ಸದರೀ ಸಿದ್ದಂಣನಿಗೆ ಮೈನರ್‌ಗಳು ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಗುಡೇಮಾರನಹಳ್ಳೀ ಸ್ಥಳದ ಹೊನ್ನಗಂಗಯ್ಯನು ಗುಡೇಮಾರನಹಳ್ಳೀ ವಾಸಸ್ಥನಾಗಿ ಮೃತಪಟ್ಟ ಸಿದ್ದಂಣನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಹೊನ್ನಗಂಗಯ್ಯನ ಅರ್ಜಿಯನ್ನು 1889ನೇ ಇಸವಿ ಮಾರ್ಚ್ ತಿಂಗಳು ತಾರೀಖು 29ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯತಪಟ್ಟು ತಿದ್ದಣನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಮಾರ್ಚ್ ತಿಂಗಳು 1ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕೈಸ್,
ಸಬ್ ಜಡ್ಜ್.

ತಾರೀಖು 11ನೇ ಫಿಬ್ರವರಿ 1889.

ಇದರಿಂದ ಸರ್ವಸ್ತ ಜನರಿಗೂ ತಿಳಿಯಪಡಿಸುವದೇನಂದರೆ, ಬೆಂಗಳೂರು ಡಿಸ್ಟ್ರಿಕ್ಟ್ ಜಂಗಲ್‌ಗಳಲ್ಲಿ ಅಂದರೆ ಸರ್ಕಾರದ ಮತ್ತು ಫಾರೆಸ್ಟ್ಸ್ ಇಲಾಖೇ ಸಂಬಂಧಪಟ್ಟ ಯಲ್ಲ ಜಂಗಲ್‌ಗಳಲ್ಲಿಯೂ 1889ನೇ ಇಸವಿ ಏಪ್ರೆಲ್ ಗುರ್ಯೇ ಲಾಗಾಯತು 1892ನೇ ಇಸವಿ ಮಾರ್ಚಿ ಆಖೈರು ವರಿಗೆ ಆಗುವ ಮೂರು ಸಾಲಗಳಲ್ಲಿಯೂ ಲಾಕ್ (ಅರಗು) ರೂಢಿಸಲು ಪಬ್ಲಿಕ್ ಆಕ್ಷನ್ ಮೂಲಕ ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸಿನಲ್ಲಿ 1889ನೇ ಇಸವಿ ಮಾರ್ಚಿ ತಾರೀಖು 13ನೇ ಬುಧವಾರ ಬೆಳಿಗ್ಯೆ 12 ಘಂಟೆಗೆ ಮಾರಲ್ಪಡುತ್ತೆ.

2. ಹರಾಜು ಮಂಜೂರುಮಾಡಲ್ಪಟ್ಟ ಚಡ್ಡಿ ಸವಾಲ್‌ದಾರನು ಮಂಜೂರಾದ ಕೂಡ್ಲೆ ನೋಟ್‌ಗಳ ಮೂಲಕ ಆಗಲಿ ರೊಕ್ಕದಲ್ಲಿ ಆಗಲಿ ಮೂರು ವರುಷದ ಹರಾಜು ಮೊಬಲಗು ಪೈಕಿ 6 ತಿಂಗಳ ಖಿಸ್ತು ಮೊಬಲಗು ಡಿಪಾಜಿಟ್ಟು ಕಟ್ಟತಕ್ಕದ್ದು. ಸದರೀ ಖಿಸ್ತು ಅಂದರೆ ಒಂದು ವರುಷದ ಹಣದಲ್ಲಿ 12ರಲ್ಲಿ ಒಂದುಭಾಗ ಅಥವಾ 3 ವರುಷದ ಹಣದಲ್ಲಿ 36ರಲ್ಲಿ ಒಂದುಭಾಗ ಹೀಗೆ ಆಗುವ 6 ತಿಂಗಳ ಖಿಸ್ತು ಕಟ್ಟಲು ಕಂಟ್ರಾಕ್ಟುದಾರನು ತಪ್ಪಿದಲ್ಲಿ ಕಂಟ್ರಾಕ್ಟುದಾರನ ಜವಾಬುದಾರಿ ಮೇಲೆ ಕಂಟ್ರಾಕ್ಟು ಪುನಃ ಮಾರಲ್ಪಡುತೆ. ಇದರಿಂದ ಯೇನಾದರು ನಷ್ಟ ಸಂಭವಿಸಿದಲ್ಲಿ ಆ ನಷ್ಟಕ್ಕೆ ಕಂಟ್ರಾಕ್ಟುದಾರನೆ ಜವಾಬು ಮಾಡತಕ್ಕದ್ದು. ಮತ್ತು ಉಂಟಾಗುವ ನಷ್ಟ ರೆವಿನ್ಯೂ ಡಿವ್ಯೆಂಡಿನಂತೆ ಸದರೀಯವನಿಂದಲೇ ವಸೂಲ್ಮಾಡಲ್ಪಡುತ್ತೆ.

3. ಮಂಜೂರ್ಮಾಡಲ್ಪಟ್ಟ ಕಂಟ್ರಾಕ್ಟುದಾರನು 1889ನೇ ಇಸವಿ ಏಪ್ರಿಲ್ ಗುರ್ಯೇ ಲಾಗಾಯತ್ತ ಬಾಬು ರೂಢಿಸಲು ತನ್ನ ಕಂಟ್ರಾಕ್ಟು ಜಾರಿಯಲ್ಲಿ ತರಬಹುದು. ಡಿಪಾಜಿಟ್ಟು ಆರು ತಿಂಗಳ ಖಿಸ್ತು ವಿನಹ ಪ್ರತಿ ತಿಂಗಳಲ್ಲಿಯು ಖಿಸ್ತು ಸಲ್ಲಿಸಬೇಕು, ಮೊದಲು ತಿಂಗಳ ಖಿಸ್ತು 1889ನೇ ಮೆ 15ರ ಒಳಗಾಗಿ ಪಾವತಿ ಮಾಡಬೇಕು ನಂತರ ಪ್ರತಿ ಮಾಹೆಖಿಸ್ತು ಮುಂದಿನ ಮಾಹೆ 15ನೇ ತಾರೀಖು ಒಳಗಾಗಿ ಕೊಡುತ್ತಾ ಬರಬೇಕು. ಡಿಪಾಜಿಟ್ಟು ಕಟ್ಟಿರುವ 6 ತಿಂಗಳ ಖಿಸ್ತು ಕಂಟ್ರಾಕ್ಟು ಮುಗಿಯುವ ಆಖೈರು 6 ತಿಂಗಳ ಖಿಸ್ತಿಗೆ ವಜಾ ಮಾಡಲ್ಪಡುತ್ತೆ.

4. ರೂಲ್ಸ್ ಮೇರೆ ಜಾರಿಯಲ್ಲಿರುವ ಟೋಕಲ್‌ಸೆಸ್ ಮೊಬಲಗು ಪ್ರತಿ ಮಾಹೆ ಖಿಸ್ತು ಮೊಬಲಗಿನ ಮೇಲೆ ಆಗುವದನ್ನು ಸಹ ಕಂಟ್ರಾಕ್ಟುದಾರನು ಕೊಡಬೇಕು.

5. ಕೇರಿದಂತೆ ಯಾರಾದು ಮಾಹೆಗಳ ಖಿಸ್ತು ಮೊಬಲಗು ವಸೂಲ್ ಆಗದೆ ಯಿದ್ದರೆ ಮತ್ತು ಜಂಗಲಿ ಸಂರಕ್ಷಣೆ ಸಂಬಂಧವಾದ ನಿಗಾವಣೆ ವಿಷಯದಲ್ಲಿ ಹ್ಯಾಗೆ ನಡಕೊಳ್ಳಬೇಕೊ ಆ ನಿಬಂಧನೆಗಳಿಗೆ ವಿರೋಧವಾಗಿ ಕಂಟ್ರಾಕ್ಟುದಾರ ನಡದುಕೊಂಡರೂ ಕಂಟ್ರಾಕ್ಟು ಕೂಡ್ಲೆ ಬ್ರೆ ಹಕರಾರ್ ರದ್ದುಮಾಡಲ್ಪಡುತ್ತೆ. ಇದರಿಂದ ಸಂಭವಿಸುವ ನಷ್ಟಕ್ಕೆ ಕಂಟ್ರಾಕ್ಟುದಾರನ್ನೆ ಗುರಿಮಾಡಲ್ಪಡುವದಲ್ಲದೆ ಕಂಟ್ರಾಕ್ಟು ಪುನಹ ಮಾರಲ್ಪಟ್ಟು ಯಿದರ ನಷ್ಟಕ್ಕೆ ಮೊದಲ್ ಕಂಟ್ರಾಕ್ಟುದಾರನ್ನ ಗುರಿಮಾಡಲ್ಪಡುತ್ತೆ. ಮತ್ತು ಯಿವನು ಮೊದಲು ಕಟ್ಟಿರುವ ಡಿಪಾಜಿಟ್ ಮೊಬಲಗು ಸರಕಾರಕ್ಕೆ ತೆಗದುಕೊಳ್ಳಲ್ಪಡುತ್ತೆ.

ಎ. ಜೆಜ್. ಮೆಕ್ಕ್ರಿಟ್ಯೆರ್,
ಡೆಪ್ಯುಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್ ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೀದಾರ ಬೆಂಗಳೂರು ಕಬ್ಬನಸಾಬರ ಪ್ರಾಪರ್ಟೇಲಿರತಕ್ಕ ಇನ್ಯಾಕಯ್ಯನ ವಿಷಯದಲ್ಲಿ—

ಸ್ಯ 1888ನೇ ಇಸವಿ ದಿವಾಳಿ ಕೇಸ್ ನಂಬರ್ 975.

ಹುಕುಂ.

ಮೇಲ್ಕಂಡ ಇನ್ಯಾಕಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಗವು ಸಬ್ ಜಡ್ಜ್‌ರಾದ ಮೆ|| ಸಿ. ಕೈಸ್ ಸಾಹೆಬರವರ ರೂಬರೂ ಅರ್ಜೇದಾರನಾದ ಇನ್ಯಾಕಯ್ಯನ್ನ ಖುದ್ದಾಗಿಯೂ ಮತ್ತು ಸದರೀದುವನ ಲೇಣೇದಾರ್ರಾದ 1–2–3ನೇ ಯವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಯಲ್ಲರೂ ಹಾಜರು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಇನ್ಯಾಕಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿರ್ಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1889ನೇ ಇಸವಿ ಜನವರಿ 21ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮದಸ್ತಖತ್ತಿನಿಂ ಕೊಡಲ್ಪಟ್ಟಿತು.